<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ - ಶ್ರೀ. ಎ.ಎನ್. ವಕೀಲರಿಂದ ಪ್ರತಿವಾದಿಯರ ಪರವಾಗಿ</u>

3. ನಾನು ಅಲ್ಯೂಮಿನಿಯಂ ಪ್ಯಾಬ್ರಿಕೇಶನ್ ಕೆಲಸವನ್ನು ನಾವೂರು ಗ್ರಾಮದಲ್ಲಿ ಮಾಡುತ್ತೇನೆ. ವಾಟ್ಸಪ್ ಗ್ರೂಪ್ ನ ಹೆಸರು ಏನು ಎಂದರೆ ಸಾಕ್ಷಿಯು ನಾನು ವಾಟ್ಸಪ್ ಗ್ರೂಪ್ ನಲ್ಲಿ ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯವರು ನನಗೆ ಚಿಕ್ಕಂದಿನಿಂದ ನೋಡಿ ಪರಿಚಯ. ಪ್ರತಿವಾದಿಯವರು ಸಿ.ಎ. ಬ್ಯಾಂಕಿನ ಅಧ್ಯಕ್ಷರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಅವರ ಮೇಲೆ ನನಗೆ ಯಾವುದೇ ತಪ್ಪು ಭಾವನೆ ಇರುವುದಿಲ್ಲ.

4. ವಾದಿ ಹಾಗೂ ಪ್ರತಿವಾದಿಯವರು ರಾಜಕೀಯವಾಗಿ ಭಿನ್ನಾಬಿಪ್ರಾಯ ಹೊಂದಿರುತ್ತಾರೆ. ಆದರೆ ವ್ಯಯಕ್ತಿಕವಾಗಿ ಯಾವುದೇ ಭಿನ್ನಾಬಿಪ್ರಾಯ ಇರುವುದಿಲ್ಲ. ಅವರಿಬ್ಬರೂ ಒಂದೇ ವೇದಿಕೆಯನ್ನು ಹಂಚಿಕೊಳ್ಳುತ್ತಾರೆ ಆದರೆ ಪರಸ್ಪರ ಮಾತನಾಡುವುದನ್ನು ನಾನು ನೋಡಿರುವುದಿಲ್ಲ. ನಾನು ಮೇಸೆಜ್ ಅನ್ನು ಮಿನಿ ವಿರಪ್ಪನ್ ಪೇಸ್ ಬುಕ್ಕ ಪೇಜ್ ನಲ್ಲಿ ನೋಡಿರುತ್ತೇನೆ. ಆದರೆ ಅದು ಯಾರ ಪೇಸ್ ಬುಕ್ ಖಾತೆ ಎಂದು ನನಗೆ ಗೊತ್ತಿಲ್ಲ. ಪೇಸ್ ಬುಕ್ ನಿಂದ ಖಾತೆದಾರರಲ್ಲದ ವ್ಯಕ್ತಿ ಮೇಸೆಜ್ ಕಳುಹಿಸಲು ಆಗುವುದಿಲ್ಲ. ಪೇಸ್ ಬುಕ್ ನಲ್ಲಿ ಖಾತೆದಾರನ ಪೋಟೋ ಬರುತ್ತದೆ ಎಂದರೆ ಸರಿ.

5. ವಾದಿಯವರು ನಮ್ಮ ಊರಿನವರು ಹಾಗಾಗಿ ಚಿಕ್ಕಂದಿನಿಂದ ನೋಡಿ ಪರಿಚಯ. ನನಗೆ ಹಾಗೂ ಅವರಿಗೆ ಯಾವುದೇ ವ್ಯವಹಾರ ಇರುವುದಿಲ್ಲ. ಈ ದಾವೆಯ ಬಗ್ಗೆ ನನಗೆ ವಾದಿಯವರು 2022ರಲ್ಲಿ ತಿಳಿಸಿರುತ್ತಾರೆ. 2022 ರಲ್ಲಿ ನಾನು ಪೇಸ್ ಬುಕ್ ನಲ್ಲಿ ಮೇಸೆಜ್ ನೋಡಿರುತ್ತೇನೆ. ಆದರೆ ನಿಖರವಾದ ದಿನಾಂಕ ಗೊತ್ತಿಲ್ಲ. ನಾನು ಸದರಿ ಮೇಸೆಜ್ ನ ವಿಚಾರವಾಗಿ ವಾದಿಯವರನ್ನು ಪ್ರಶ್ನೇ ಮಾಡಿದ್ದರಿಂದ ನಾನು ಸದರಿ ಮೇಸೆಜ್ ಅನ್ನು ಓದಿರುವ ವಿಚಾರ ಅವರಿಗೆ ತಿಳಿಯಿತು. ಅವರನ್ನು ನೇರವಾಗಿ ಬೇಟಿ ಮಾಡಿ ಪ್ರಶ್ನೇ ಮಾಡಿರುತ್ತೇನೆ. ಮೇಸೆಜ್ ನೋಡಿ 4-5 ದಿನಗಳ ನಂತರ ಅವರನ್ನು ಕೇಳಿರುತ್ತೇನೆ. ಪೇಸ್ ಬುಕ್ ನಲ್ಲಿ ಏನು ಮೇಸೆಜ್ ಬಂದಿತ್ತು ಎಂದರೆ ಸಾಕ್ಷಿಯು ವಾದಿಯವರು ಅವರ ಮಗಳ ವಯಸ್ಸಿನ ಹೆಣ್ಣು ಮಕ್ಕಳನ್ನು ಬಿಡುವುದಿಲ್ಲ ಎಂದು, ಕಾರಿನಲ್ಲಿ ಇಬ್ಬರು ಒಟ್ಟಿಗೆ ಇದ್ದರೂ ಎಂದು

ಬರೆಯಲಾಗಿತ್ತು. ಪೇಸ್ ಬುಕ್ ಮೇಸೆಜ್ ನ ಪ್ರಿಂಟ್ ಅನ್ನು ನಾನು ವಾದಿಯವರಿಗೆ ತೆಗೆದುಕೊಟ್ಟಿರುವುದಿಲ್ಲ.

6. ನಾನು ಹೇಳಿರುವ ಮೇಸೆಜ್ ಪೇಸ್ ಬುಕ್ ನಲ್ಲಿ ಇತ್ತು ಎಂದು ವಾದಿಯವರಿಗೆ ಹೇಳಿರುತ್ತೇನೆ. ನಿಪಿ 3 ರಲ್ಲಿ ಕಂಡುಬರುವ ಖಾತೆಯಲ್ಲಿ ಇರುವ ವ್ಯಕ್ತಿಯಾರು ಎಂದು ನನಗೆ ಗೊತ್ತಿಲ್ಲ. ಅದರ ಮಂದುವರೆದ ಮೇಸೆಜ್ ಅನ್ನು ಸಹಃ ಪೇಸ್ ಬುಕ್ ನಲ್ಲಿ ನೋಡಿರುತ್ತೇನೆ. ಅದು ಯಾರ ಅಕೌಂಟ ಎಂದು ನೀವು ಪರೀಕ್ಷೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಅದು ಪೇಕ್ ಅಕೌಂಟ ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ